ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

## ಮುಂದುವರೆದ ಪಾಟೀಸವಾಲು : ವಾದಿ ಪರ ವಕೀಲರಿಂದ

ನಿಡಿ-60 ರಲ್ಲಿ ಇರುವ ಆಸ್ತಿಗೆ ಸಂಬಂಧಿಸಿದಂತೆ ದಾನಪತ್ರವು ಖೊಟ್ಟೆಯಾಗಿರುತ್ತದೆ ಎಂದು ನಾನು ತಕರಾರು ಅರ್ಜಿಯನ್ನು CMC ಕಚೇರಿಗೆ ಸಲ್ಲಿಸಿದ್ದೆನು ಎಂದರೆ ಸರಿ. ನಿಡಿ-61 ರ ಮೂಲ ಪ್ರತಿ ಬ್ಯಾಂಕಿನಲ್ಲಿ ಇರುತ್ತದೆ. ನಿಡಿ-61 ದಾಖಲೆಯು ಖೊಟ್ಟೆ ಇರುತ್ತದೆ ಎಂದರೆ ಸರಿಯಲ್ಲ. ನಿಡಿ-61 ದಾಖಲೆಯ ಮೂಲ ಪ್ರತಿಯನ್ನು ನಾನು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-61 ರಲ್ಲಿ ಇರುವ ಆಸ್ತಿ ಸಂಖ್ಯೆ: 6-4-336 ಎಂಬ ಅಕ್ಷರವನ್ನು ತಿದ್ದಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-61 ರಲ್ಲಿ ಇರುವ ಆಸ್ತಿಯನ್ನು ನಿಮಗೆ ಎಷ್ಟು ಜನ ಮಾರಾಟ ಮಾಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು 6 ಜನ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ 6 ಜನಗಳೆಂದರೆ ಮೊಹಮ್ಮದ್ ಅಲಿ ಅಲಿಯಾಸ್ ಚೋಟೆಮಿಯಾ, ಮೆಹಬೂಬ್ ಪಾಷ, ಅಬ್ದುಲ್ ಅಜೀಜ್, ಮೋಸಿನ್ ಅಲಿ, ಅಬ್ದುಲ್ ಅಲಿ, ಬಾಬಾಜಾನ್ ಎಂದರೆ ಸರಿ. ಇವರ 6 ಜನರ ಹೆಸರಿಗೆ ನಗರಸಭೆ ದಾಖಲೆಗಳಲಿ ಖಾತೆ ಇತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮೊಹಮ್ಮದ್ ಅಲಿ ಅಲಿಯಾಸ್ ಚೋಟೆಮಿಯಾರವರ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ನಿಡಿ-61 ದಾಖಲೆಯು ಮೇಲೆ ಹೇಳಿದ 6 ಜನರು ಕೂಡಿ ಅದರಲ್ಲಿ ಇರುವ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದು ಸೂಚಿಸುತ್ತದೆ ಎಂದರೆ ಸರಿ. ನಿಡಿ-61 ರಲ್ಲಿ ವಾದಿಯರು ಯಾರು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಸದ್ರಿ ಮೊಹಮ್ಮದ್ ಅಲಿ ಅಲಿಯಾಸ್ ಚೋಟೆಮಿಯಾರವರು ಮಾನಸಿಕವಾಗಿ ಅಸ್ವಸ್ಥರಾಗಿದ್ದರು ಎಂದರೆ ಸರಿಯಲ್ಲ. ಸದ್ರಿ ಮೊಹಮ್ಮದ್ ಅಲಿ ಅಲಿಯಾಸ್ ಚೋಟೆಮಿಯಾರವರು ಮಾನಸಿಕವಾಗಿ ಅಸ್ವಸ್ಥರಾಗಿರುವ ಕಾರಣ ಅವರ 5 ಜನ ಮಕ್ಕಳ ಸಹಿಯನ್ನು ನಾನು ನಿಡಿ-61 ದಾಖಲೆಗೆ ಸುಳ್ಳಾಗಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-61 ದಾಖಲೆಯು ಖೊಟ್ಟೆ ದಾಖಲೆ ಇದ್ದು ಅದಕ್ಕೆ ಯಾವುದೇ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-63 ರಿಂದ ನಿಡಿ-74 ದಾಖಲೆಗಳನ್ನು ಖೊಟ್ಟೆ ದಾಖಲೆಗಳು ಇರುತ್ತದೆ ಎಂದರೆ ಸರಿಯಲ್ಲ. ನಿಡಿ-75 ರಿಂದ ನಿಡಿ-77 ದಾಖಲೆಗಳು ನನಗೆ ವೈಯಕ್ತಿಕವಾಗಿ ಸೇರಿದ ದಾಖಲೆಗಳು ಎಂದು, ಅವುಗಳಿಗೆ ಯಾವುದೇ

ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಮೇಲೆ ಯಾವುದೇ ಸಾಲ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳನ್ನು ನಾನು ಸೃಷ್ಟಿಸಿದ್ದು, ವಾದಿಯರಿಗೆ ದಾವಾ ಸ್ವತ್ತನ್ನು ಎತ್ತಿಹಾಕುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-61 ದಾಖಲೆಯು ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

(ಇಂದು ದಿನಾಂಕ 12-03-2024 ರಂದು ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಕೊಪ್ಪಳ.